ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಆಗಸ್ಟ್ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | August 2022 | Monthly**


# ಸ್ವಾತಂತ್ರ್ಯದ ಅಮೃತ ಮಹೋತ್ಸವ








**A Journal of Karnataka Rajya Madhyamika Shikshaka Sangha (R.)**

# ಸಂಪಾದಕೀಯ

ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ಆತ್ಮೀಯ ಶಿಕ್ಷಕರೆಲ್ಲರಿಗೂ ಅಭಿನಂದನೆಗಳು.

ಶಾಲೆಗಳಲ್ಲಿ, ಮನೆಗಳಲ್ಲಿ ಬಹಳ ಹೆಮ್ಮೆಯಿಂದ ತ್ರಿವರ್ಣಧ್ವಜರೋಹಣ ಮಾಡಿ, ಮನೆಮಂದಿ, ವಿದ್ಯಾರ್ಥಿಗಳಿಗೆಲ್ಲಾ ಸ್ವಾತಂತ್ರ್ಯವನ್ನು ಗಳಿಸಿದ ರೀತಿ, ಉಳಿಸಿಕೊಳ್ಳುವ ಬಗೆ ಎಲ್ಲವನ್ನೂ ತಾವೆಲ್ಲರೂ ಸವಿವರವಾಗಿ ಹೇಳಿರುತ್ತೀರಿ ಎಂದು ನನ್ನ ನಂಬಿಕೆ. ಹರ್ ಘರ್ ತಿರಂಗಾ ಕಾರ್ಯಕ್ರಮದಡಿಯಲ್ಲಿ ಮನೆ-ಮನೆಗಳಲ್ಲೂ ತ್ರಿವರ್ಣ ಧ್ವಜಾರೋಹಣ ಮಾಡಲು ಸರ್ಕಾರ ಪ್ರತಿಯೊಬ್ಬ ನಾಗರಿಕರಿಗೂ ಅವಕಾಶ ಮಾಡಿಕೊಟ್ಟಿದ್ದು ನಮ್ಮೆಲ್ಲರಿಗೂ ಒಂದು ಸುವರ್ಣಾವಕಾಶವೇ ಸರಿ. ಆ ಘಳಿಗೆ ನಮ್ಮ ಜೀವನದಲ್ಲಿನ ಸುವರ್ಣ ಘಳಿಗೆ ಎಂದರೆ ತಪ್ಪಾಗಲಾರದು. ಮನೆಗಳಲ್ಲಿ ಧ್ವಜಾರೋಹಣ ಮಾಡುವಾಗ ನಾವು ಅನುಭವಿಸಿದ ಆ ಹೆಮ್ಮೆಯ ಕ್ಷಣ ಅದ್ಭುತ, ರೋಮಾಂಚನಕಾರಿ ಎಂದರೆ ತಪ್ಪಾಗಲಾರದು. ಸ್ವಾತಂತ್ರ್ಯ ಗಳಿಸಿದ ತಕ್ಷಣ 1947ರಲ್ಲಿ ಬ್ರಿಟಿಷ್ ಧ್ವಜವನ್ನು ಅವರೋಹಣ ಮಾಡಿ ಭಾರತದ ತ್ರಿವರ್ಣ ಧ್ವಜಾರೋಹಣ ಮಾಡಿದಾಗ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಇನ್ನೆಂತಹ ಹೆಮ್ಮೆಯ, ಸಂತೋಷಕರ, ರೋಮಾಂಚನಕಾರಿ, ಅದ್ಭುತ ಭಾವನೆಗಳನ್ನು ಅನುಭವಿಸಿರಬಹುದಲ್ಲವೇ?

ಸರ್ಕಾರ ಮೂರು ದಿನಗಳ ಕಾಲ ಧ್ವಜವನ್ನು ನಮ್ಮ ನಮ್ಮ ಮನೆಗಳ ಮೇಲೆ ಹಾರಾಡಲು ಸುವರ್ಣಾವಕಾಶವನ್ನು ನಮಗೆಲ್ಲಾ ನೀಡಿತ್ತು. ಆದರೆ ದುರಾದೃಷ್ಟವೆಂದರೆ ಸ್ವಾತಂತ್ರ್ಯೋತ್ಸವದ ಆಚರಣೆ ಕಳೆದು ಒಂದು ವಾರವಾದರೂ ಕೆಲವೊಂದು ಮನೆಗಳ ಮೇಲೆ ತ್ರಿವರ್ಣ ಧ್ವಜವನ್ನು ನೋಡಿ ಬೇಸರವೂ ಆಯಿತು. ಸರ್ಕಾರ ನಾವೆಲ್ಲರೂ ಜವಾಬ್ದಾರಿಯುತ ಪ್ರಜೆಗಳೆಂದು ನಮಗೆ ಜವಾಬ್ದಾರಿಯುತ, ಘನತೆಯತ್ತ ಕಾರ್ಯವನ್ನು ನೀಡಿತ್ತು. ಆದರೆ ಧ್ವಜಾರೋಹಣ ಮಾಡುವಾಗ ಇದ್ದ ಜವಾಬ್ದಾರಿಯನ್ನು ನಾವು ಮೂರು ದಿನಗಳ ನಂತರ ಧ್ವಜಾ ಅವರೋಹಣ ಮಾಡುವಾಗಲೂ ತೋರಬೇಕಲ್ಲವೇ?

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಆಚರಿಸುವಾಗ ನಾವೆಲ್ಲಾ ಸ್ವಾತಂತ್ರ್ಯವನ್ನು ಗಳಿಸಿದ ರೀತಿ, ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನ ಎಲ್ಲವನ್ನು ಮಕ್ಕಳಿಗೆ ವಿವರಿಸಿದ್ದೇವೆ. ಆದರೆ ಇನ್ನು ಮುಂದೆ ಅಂದರೆ 25 ವರ್ಷಗಳನ್ನು ಕಳೆದಾಗ ನಾವೆಲ್ಲಾ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವವನ್ನು ಆಚರಿಸುತ್ತೇವೆ. ಆಗ ಈಗಿನ ನಮ್ಮ ವಿದ್ಯಾರ್ಥಿಗಳೆಲ್ಲರೂ ಜವಾಬ್ದಾರಿಯುತ ಪ್ರಜೆಗಳಾಗಿರುತ್ತಾರೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು, ಅವರೆಲ್ಲಾ ದೇಶವನ್ನು ಇನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ನಾಗರಿಕರಾಗುವವರು. ಅವರಿಗೆಲ್ಲಾ ಶತಮಾನೋತ್ಸವವನ್ನು ಆಚರಿಸುವಾಗ ನಮ್ಮ ದೇಶ ಹೇಗಿರಬೇಕೆಂಬುದರ ಕಲ್ಪನೆಯನ್ನು ಕೊಟ್ಟು, ಅವರೆಲ್ಲಾ ತಮ್ಮ ತಮ್ಮ ಕಾರ್ಯಗಳಿಂದ ಭಾರತದೇಶವನ್ನು ವಿಶ್ವಗುರುವಾಗಿ ಹೇಗೆ ಮಾಡಬೇಕೆಂದು ನಾವೆಲ್ಲಾ ಪ್ರೇರಣೆಯನ್ನು ನೀಡಬೇಕಾಗಿದೆ. ಈ ಕಾರ್ಯವನ್ನು ತಾವೆಲ್ಲಾ ಮಾಡುತ್ತೀರಿ ಎನ್ನುವ ನಂಬಿಕೆ ನಮ್ಮಲ್ಲಿದೆ.

– – –

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಆಗಸ್ಟ್ 1 ರಂದು ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನದ ಕರೆಯನ್ನು ನೀಡಿ 100000 ಶಾಲೆಗಳನ್ನು ತಲುಪುವ ಗುರಿಯನ್ನು ಎಲ್ಲಾ ರಾಜ್ಯ ಸಂಘಟನೆಗಳಿಗೆ ನೀಡಿತ್ತು. ಈ ಕರೆಯನ್ನು ಸ್ವೀಕರಿಸಿದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 2000 ಕ್ಕಿನ್ನು ಹೆಚ್ಚು ಶಾಲೆಗಳಿಗೆ ತಲುಪಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದೆ. ಆಗಸ್ಟ್ 1 ರಂದು ಹಬ್ಬದ ವಾತಾವರಣವೇ ಸೃಷ್ಟಿಯಾಗಿತ್ತು ಎಂದರೆ ತಪ್ಪಾಗಲಾರದು. ಅತಿ ಉತ್ಸಾಹದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕಾರ್ಯಕರ್ತರಿಗೆ ಅಭಿನಂದನೆಗಳು. ಈ ಸಂಚಿಕೆಯನ್ನು ತಾವು ಕಾರ್ಯಕ್ರಮ ಮಾಡಿ ಕಳುಹಿಸಿರುವ ಫೋಟೋಗಳ ಮುದ್ರಣಕ್ಕೆ ಹೆಚ್ಚು ಅವಕಾಶವನ್ನು ನೀಡಲಾಗಿದೆ. ರಾಜ್ಯದ ಎಲ್ಲಾ ಕಡೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕಾರ್ಯಕರ್ತರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಧನ್ಯವಾದವನ್ನು ಅರ್ಪಿಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಸ್ವರಾಜ್ಯ ಸಂಗ್ರಾಮದಲ್ಲಿ ಸಾಹಿತ್ಯಾತ್ಮಕ ಹೋರಾಟ 3
- ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ 4–11
- ಎಬಿಆರ್‌ಎಸ್‌ಎಮ್‌ನ ರಾಷ್ಟ್ರೀಯ ಅಧಿವೇಶನದ ತಯಾರಿ 12

# ಅಮೃತೋತ್ಸವದ ಸ್ವಾತಂತ್ರ್ಯೋತ್ಸವ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ಸಮುದ್ರ ಮಥನದ ಸಂದರ್ಭದಲ್ಲಿ ಕ್ಷೀರಸಾಗರದ ಗರ್ಭದಿಂದ ಅಮೃತ ಮಾತ್ರವೇ ಹೊರಬರಲಿಲ್ಲ. ಲಕ್ಷ್ಮೀಯೇ ಆದಿಯಾಗಿ 14 ರತ್ನಗಳೂ ಬಂದುವು. ಕಾಮಧೇನು, ಕಲ್ಪವೃಕ್ಷ, ಕೌಸ್ತುಭಮಣಿ, ಐರಾವತ, ಉಚ್ಚೈಶ್ರವಸ್ಸು ಮುಂತಾದುವು ಒಂದೊಂದೂ ಅದ್ಭುತ ಮತ್ತು ಅಪರೂಪದ ಗುಣಗಳನ್ನು ಹೊಂದಿರುವಂತಹವೇ. ನಾವೀಗ ನಮ್ಮ ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಯ ಸಂಭ್ರಮದಲ್ಲಿದ್ದೇವೆ. ಅಮೃತಕ್ಕೆ ನಿರಂತರವಾಗಿ ಚೈತನ್ಯವನ್ನು ನೀಡುವ ಶಕ್ತಿ ಇರುವಂತೆಯೇ 'ಸ್ವಾತಂತ್ರ್ಯ' ಎಂಬುದು ವ್ಯಕ್ತಿಗಾಗಲೀ, ದೇಶಕ್ಕಾಗಲೀ ನೀಡುವ ಚೈತನ್ಯ, ಉತ್ಸಾಹ ಬೆಲೆ ಕಟ್ಟಲಾಗದ್ದು. ಆದ್ದರಿಂದಲೇ ಈ 'ಸ್ವಾತಂತ್ರ್ಯ'ಕ್ಕಾಗಿ ಎಲ್ಲರೂ ಹಂಬಲಿಸುವುದು, ಅಪೇಕ್ಷಿಸುವುದು.

ಏಕೆಂದರೆ ಇದು ಪ್ರತಿಯೊಬ್ಬರಲ್ಲಿಯೂ ಆತ್ಮವಿಶ್ವಾಸವನ್ನು, ಆತ್ಮಗೌರವವನ್ನು ತುಂಬುತ್ತ ದೇಹ, ಮನಸ್ಸುಗಳಲ್ಲಿ ಸದಾ ಹೊಸತನದ ಭಾವವನ್ನು ಹರಿಸುವಂತಹ ಅದ್ಭುತ ಶಕ್ತಿಯ ಪ್ರೇರಣಾ ಸ್ರೋತವಾಗಿರುತ್ತದೆ.

ಈ ಸ್ವಾತಂತ್ರ್ಯವೆಂಬ ಅಮೃತವನ್ನು ಪಡೆಯಲು ನಡೆದ ಹೋರಾಟದ ಸಂದರ್ಭದಲ್ಲಿ ದೇಶದ ಎದುರು ಸರ್ವ ಸಮರ್ಪಣೆ ಮಾಡಿದ ನೂರಾರು ರತ್ನಗಳ ಚರಿತ್ರೆಯೇ ನಮ್ಮ ಇತಿಹಾಸದ ಪುಟಗಳನ್ನು ಅಲಂಕರಿಸಿವೆ. ಅವರೆಲ್ಲರ ದೇಶಪ್ರೇಮ, ದೇಶಭಕ್ತಿ, ತ್ಯಾಗ, ಬಲಿದಾನಗಳ ಫಲವಾಗಿಯೇ ನಾವಿಂದು ಸ್ವತಂತ್ರ ದೇಶದಲ್ಲಿ ಸ್ವತಂತ್ರರಾಗಿ ಬಾಳುತ್ತಿರುವುದು. ಅಂದಮೇಲೆ ನಾವೆಲ್ಲರೂ ಆ ಮಹಾನ್ ಚೇತನಗಳಿಗೆ ಸದಾಕಾಲಕ್ಕೂ ಕೃತಜ್ಞರಾಗಿರಬೇಕಾದುದು ಅವಶ್ಯ. ಅಷ್ಟೇ ಅಲ್ಲ, ಅವರೆಲ್ಲರ ಶ್ರಮದ ಫಲವಾದ ದೇಶದ ಸ್ವಾತಂತ್ರ್ಯವನ್ನು ಆರೋಗ್ಯಕರವಾಗಿ, ಮೌಲಿಕವಾಗಿಯೇ ಉಳಿಸಿ, ರಕ್ಷಿಸಬೇಕಾದುದೂ ನಮ್ಮೆಲ್ಲರ ಕರ್ತವ್ಯವೇ ಆಗಿದೆ.

ಅಮೃತಕ್ಕಾಗಿ ಸಮುದ್ರಮಥನದ ಕಾರ್ಯವನ್ನು ಮಾಡಲು ಬಹಳಷ್ಟು ಸಿದ್ಧತೆಗಳನ್ನು ಮಾಡಬೇಕಾಯಿತು. ಮಂದರಪರ್ವತವನ್ನು ಕಡೆಗೋಲಾಗಿಸಿ, ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿ ಮಾಡಿ, ಪರ್ವತವು ಸಮುದ್ರದಲ್ಲಿ ಜಾರದಂತೆ ಆಧಾರವಾಗಿ ಮಹಾವಿಷ್ಣುವೇ ಕೂರ್ಮನಾಗಿ ನಿಂತಮೇಲೇ ಮಥನದ ಕಾರ್ಯ ಸುಗಮವಾಗಿ ನಡೆದಿತ್ತು. ಅದರಂತೆಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ದೇಶದ ಜನರನ್ನು ಸಂಘಟಿಸುವುದರಿಂದ ಆರಂಭಿಸಿ, ಅವರಲ್ಲಿ ದೇಶಪ್ರೇಮದ, ಸ್ವಾತಂತ್ರ್ಯದ ಮಹತ್ತ್ವವನ್ನು ತಿಳಿಸಿ, ಜಾಗೃತಿಗೊಳಿಸುವಲ್ಲಿ ನೂರಾರು ದೇಶಭಕ್ತರು ನಾಯಕತ್ವ ವಹಿಸಿಕೊಂಡರು. ಈ ದೇಶಭಕ್ತರ ಬೃಹತ್ ಜನಸ್ತೋಮದಲ್ಲಿ ವಯಸ್ಸಿನ ಪರಿವೆಯಿರಲಿಲ್ಲ, ಸ್ತ್ರೀಪುರುಷರೆಂಬ ಭೇದವಿರಲಿಲ್ಲ, ಶ್ರೀಮಂತ-ಬಡವರೆಂಬ ವರ್ಗೀಕರಣವಿರಲಿಲ್ಲ, ಆಳರಸರೆಂಬ ತಾರತಮ್ಯವಿರಲಿಲ್ಲ. ಸಮಸ್ತರ ಮುಂದಿದ್ದ ಗುರಿ ಒಂದೇ ಆಗಿತ್ತು. ಅದೇ, ದೇಶದ ಸ್ವಾತಂತ್ರ್ಯವಾಗಿತ್ತು, ಪರಕೀಯರ ದಬ್ಬಾಳಿಕೆಗೆ ತಿಲಾಂಜಲಿ ನೀಡುವ ಧ್ಯೇಯವಾಗಿತ್ತು. ಅವರೆಲ್ಲರಲ್ಲಿ ಪ್ರಾಣದ ಪರಿವೆಯಿರಲಿಲ್ಲ. ನೇತೃತ್ವ ವಹಿಸಿಕೊಂಡು ಜನರನ್ನು ಮುನ್ನಡೆಸಲು ದೇಶದಾದ್ಯಂತ ಸಿದ್ಧರಾದವರಿಗೆ ಲೆಕ್ಕವೇ ಇರಲಿಲ್ಲ. ಅಹಿಂಸೆ ಕೆಲವರ ಅಸ್ತ್ರವಾಗಿದ್ದರೆ ಮತ್ತೆ ಕೆಲವರ ಅಸ್ತ್ರವಾಗಿ ಸ್ವಾಭಿಮಾನದ, ಕೆಚ್ಚಿನ ಹೋರಾಟವೆಂಬ, ಪ್ರತಿ ಏಟಿತ್ತು. ಈ ಹೋರಾಟದೊಂದಿಗೆ ಗೆಲುವನ್ನು ಪಡೆಯುವುದೇನೂ ಸುಲಭವಾಗಿರಲಿಲ್ಲ. ಏಕೆಂದರೆ ನೂರಾರು ವರ್ಷಗಳ ತಮ್ಮ ಆಧಿಪತ್ಯದಲ್ಲಿ ಬ್ರಿಟಿಷರು ಸರ್ವಾಂಗೀಣವಾಗಿ ದೇಶವನ್ನು ಆವರಿಸಿಕೊಂಡಿದ್ದರು. ಕೇವಲ ರಾಜಕೀಯವಾಗಲ್ಲದೆ ಜನರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ತಂದು ದೇಶದ ಚಿತ್ರವನ್ನೇ, ಬಾಹ್ಯ ಮತ್ತು ಆಂತರಿಕ ಸ್ವರೂಪವನ್ನೇ ಬದಲಿಸಿಬಿಟ್ಟಿದ್ದರು. ಆದುದರಿಂದ ಈ ಎಲ್ಲ ಕ್ಷೇತ್ರಗಳಲ್ಲಿ ಹೋರಾಟ ಸಮಗ್ರವಾಗಿ ನಡೆಯಬೇಕಾಗಿತ್ತು. ಹಾಗಾಗಿ, ರಾಜಕೀಯ ನಾಯಕರು, ಸಾಮಾಜಿಕ ಕಾರ್ಯಕರ್ತರು, ಸಾಹಿತಿಗಳು, ಕಲಾವಿದರು, ಶಿಕ್ಷಣತಜ್ಞರು ಎಲ್ಲರೂ ತಮ್ಮತಮ್ಮ ಕ್ಷೇತ್ರಗಳಲ್ಲಿ 'ಭಾರತೀಯತೆ'ಯನ್ನು ಪುನರ್‌ಸ್ಥಾಪಿಸುವ ಕಾರ್ಯದಲ್ಲಿ ಅಹರ್ನಿಶಿ ಶ್ರಮಿಸತೊಡಗಿದರು. ಅದಕ್ಕಾಗಿ ಹಲವು ರೀತಿಗಳಿಂದ ಹಲವು ಮಾಧ್ಯಮಗಳ ಮೂಲಕ ದೇಶಾದ್ಯಂತ ಜನಜಾಗೃತಿಯನ್ನು ಮೂಡಿಸುತ್ತ ಆಂತರಿಕ ಸಂಚಲನವನ್ನುಂಟು ಮಾಡಿದರು.

'ಸ್ವಾತಂತ್ರ್ಯ ಹೋರಾಟ' ಎಂಬ ಈ ಸಮುದ್ರ ಮಥನದ ನೆನಪಿನ ಬುತ್ತಿಯನ್ನು ತೆರೆದಾಗ ಅದರಿಂದ ಹೊರಬರುವ ಅಮೂಲ್ಯ ರತ್ನಗಳು ಒಂದೆರಡಲ್ಲ, ನೂರಾರು, ಸಾವಿರಾರು, ಲಕ್ಷಾಂತರ ವೀರಾಗ್ರಣಿಗಳ ಹೆಸರುಗಳು ಮೊಗೆದಷ್ಟೂ ಹೊರಬರುತ್ತವೆ.ಅಷ್ಟೇ ಅಲ್ಲ, ಹೆಸರೂ ಅರಿಯದ ದೇಶಭಕ್ತ ಹುತಾತ್ಮರು ನಾಡಿನ, ದೇಶದ ಮೂಲೆಮೂಲೆಗಳಲ್ಲಿ ಭಾರತಮಾತೆಯ ಪಾದದ ಅಡಿಯಲ್ಲಿ ತನುಮನಧನಗಳನ್ನು ಅರ್ಪಿಸಿದರೆಂಬ ಸಂಗತಿಗಳನ್ನು ತಿಳಿದಾಗ ಅವರೆಲ್ಲರ ತ್ಯಾಗವನ್ನು ನೆನೆದು ಕಣ್ಣುಗಳು ತೇವಗೊಳ್ಳುತ್ತವೆ. ತಲೆಬಾಗಿ ನಮಸ್ಕರಿಸುವಂತಾಗುತ್ತದೆ.

'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಘೋಷಣೆಯನ್ನು ಮಾಡುತ್ತಾ, ದೇಶಪ್ರೇಮದ ಅಲೆಯನ್ನು ಜನರಲ್ಲಿ ತುಂಬಿದ ಲೋಕಮಾನ್ಯರೇ ಆದಿಯಾಗಿ ಹಲವಾರು ದೇಶಭಕ್ತರು ಹಂತಹಂತವಾಗಿ ನಡೆಸಿದ ಹೋರಾಟದ ಹಲವು ಮಜಲುಗಳಲ್ಲಿ ಸಾವುನೋವುಗಳು, ರಕ್ತಪಾತಗಳು, ಬಲಿದಾನಗಳು, ಸ್ಥಿರಚರ ವಸ್ತುಗಳ ನಾಶವೂ ಸೇರಿದಂತೆ ಬ್ರಿಟಿಷರ ಕಡೆಯಿಂದ ಇನ್ನಿಲ್ಲದಷ್ಟು ಪ್ರಮಾಣದಲ್ಲಿ ನಡೆದುವು. ಮನೆ-ಮಠಗಳನ್ನು ತೊರೆದು, ಬೀದಿಗಿಳಿದು ಹೋರಾಡಿದವರೆಷ್ಟೋ? ಆಳುತ್ತಿದ್ದ ಸರ್ಕಾರದ ದೌರ್ಜನ್ಯಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡವರೆಷ್ಟೋ? ಬಂಧನಕ್ಕೆ ಒಳಗಾಗಿ ಸೆರೆಮನೆ ಸೇರಿದವರೆಷ್ಟೋ? ತಮ್ಮವರನ್ನು ಕಳೆದುಕೊಂಡು ಅನಾಥರಾದ ಮಕ್ಕಳ, ಗಂಡನನ್ನು ಕಳೆದುಕೊಂಡು ವಿಧವೆಯರಾದ ಹೆಂಗಸರ ಸಂಖ್ಯೆಗೆ ಲೆಕ್ಕವೇ ಇರಲಿಲ್ಲ. ಆದರೇನು? ಜನರ ಮೈಮನಗಳಲ್ಲಿ ತುಂಬಿ ಹರಿಯುತ್ತಿದ್ದ ದೇಶಪ್ರೇಮ ಅದಾವುದನ್ನೂ ಲೆಕ್ಕಿಸುತ್ತಿರಲಿಲ್ಲ. ತಮ್ಮ ನಾಯಕರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಬ್ರಿಟಿಷರನ್ನು ದೇಶದಿಂದ ಹೊರಗೋಡಿಸುವ, ಸ್ವತಂತ್ರ ಭಾರತದ ಪ್ರಜೆಗಳು ತಾವಾಗಬೇಕೆಂಬ ಹಂಬಲವೊಂದೇ ಅವರ ಮನದಲ್ಲಿದ್ದುದು. ಈ ಕಾರ್ಯದಲ್ಲಿ ಅನೇಕ ದೇಶೀಯ ಸಂಸ್ಥಾನಗಳ ರಾಜಮಹಾರಾಜರು ತಮ್ಮತಮ್ಮ ದೇಶಭಕ್ತ ಪ್ರಜೆಗಳೊಂದಿಗೆ ಹೋರಾಡುತ್ತ ಭಾರತೀಯರ ಶೌರ್ಯ, ಪರಾಕ್ರಮ, ಸ್ವಾಭಿಮಾನ, ದೇಶಭಕ್ತಿಯ ಕಾವಿನ ಚುರುಕು ಮುಟ್ಟಿಸಿದವರ ಸಂಖ್ಯೆಯೂ ಅಪಾರವಾಗಿಯೇ ಇತ್ತು. ಅದೇ ರೀತಿಯಲ್ಲಿ ಹಾಗೆ ಪ್ರಾಣದ ಹಂಗು ತೊರೆದು ಪ್ರಾಣತೆತ್ತ ಸಾಮಾನ್ಯರೂ ಕಡಿಮೆಯೇನಿರಲಿಲ್ಲ. ಈ ಎಲ್ಲ ಮಹಾನ್ ವ್ಯಕ್ತಿಗಳ ತ್ಯಾಗವನ್ನು ಸ್ಮರಿಸುತ್ತ, ಅವರಿಂದ ದೊರೆತ ಸ್ವಾತಂತ್ರ್ಯವೆಂಬ ಅಮೃತವನ್ನು ಜೋಪಾನವಾಗಿಡುವ ಕರ್ತವ್ಯ ನಮ್ಮದಾಗಿದೆ. ಅದರ ನಿರ್ವಹಣೆ ಮಾಡುವಾಗ ಎದುರಾಗುವ ದುಷ್ಟಶಕ್ತಿಗಳನ್ನು ಸಂಹಾರ ಮಾಡೋಣ.

ಅಮೃತೋತ್ಸವವೆಂಬ ಹೆಸರನ್ನು ಅರ್ಥಪೂರ್ಣವಾಗಿಸುವ ಕಾರ್ಯದಲ್ಲಿ ನಾವೆಲ್ಲರೂ ಒಂದಾಗಿ ಕೈಜೋಡಿಸುವ ಸಂಕಲ್ಪವನ್ನು ಮಾಡೋಣ. ದೇಶದ ಪ್ರಗತಿಯಲ್ಲಿ ಚಿರಚೈತನ್ಯದ ಚಿಲುಮೆಯು ಹೊನಲಾಗಿ ಹರಿಯುವಂತೆ ಮಾಡೋಣ. ವಂದೇ ಮಾತರಂ, ಜೈ ಭಾರತ ಮಾತೆ. ●

# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ

**ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಆಗಸ್ಟ್ 1 ರಂದು ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನದ ಕರೆಯನ್ನು ನೀಡಿ 100000 ಶಾಲೆಗಳನ್ನು ತಲುಪುವ ಗುರಿಯನ್ನು ಎಲ್ಲಾ ರಾಜ್ಯ ಸಂಘಟನೆಗಳಿಗೆ ನೀಡಿತ್ತು. ಈ ಕರೆಯನ್ನು ಸ್ವೀಕರಿಸಿದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 2000 ಕ್ಕಿನ್ನು ಹೆಚ್ಚು ಶಾಲೆಗಳಿಗೆ ತಲುಪಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದೆ. ರಾಜ್ಯಾದ್ಯಂತ ವಿವಿಧೆಡೆ ನಡೆದ ಕಾರ್ಯಕ್ರಮಗಳ ಭಾವಚಿತ್ರಗಳು.**



# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



ಗುರು ಅತ್ಯಂತ ಪರಿಶುದ್ಧನಾಗಿರಬೇಕು –ಸ್ವಾಮಿವಿವೇಕಾನಂದ

# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



ಗುರುವಿನ ಕೆಲಸ ಸಹಜಪ್ರೇಮದಿಂದ ಕೂಡಿದ್ದಾಗಿರಬೇಕು – ಸ್ವಾಮಿ ವಿವೇಕಾನಂದ

# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



ಗುರುವಿನ ಆದರ್ಶ ಜೀವನವಿಲ್ಲದೆ ವಿದ್ಯಾಭ್ಯಾಸವಿಲ್ಲ –ಸ್ವಾಮಿ ವಿವೇಕಾನಂದ

# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



**ದೇವರಂತೆ ನಿಮ್ಮ ಗುರುವನ್ನು ಪೂಜಿಸಿ, ಆದರೆ ವಿಮರ್ಶೆ ಮಾಡದೆ ಅವರ ಮಾತನ್ನು ಕೇಳಬೇಡಿ – ಸ್ವಾಮಿ ವಿವೇಕಾನಂದ**

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

ನಮ್ಮ ಕರ್ನಾಟಕದ ಹೆಮ್ಮೆಯ ಯೋಧನಾದ ಸಂಗೊಳ್ಳಿ ರಾಯಣ್ಣ, ಕಿತ್ತೂರು ಸಂಸ್ಥಾನದ ಸೈನ್ಯದ ಮುಖ್ಯಸ್ಥನಾಗಿದ್ದನು. ರಾಯಣ್ಣ ತಮ್ಮ ಜೀವಿತಾವಧಿಯವರೆಗೂ ಬ್ರಿಟಿಷರೊಂದಿಗೆ ಹೋರಾಟ ಮಾಡಿದ ದಿಟ್ಟ ಹೋರಾಟಗಾರ. ರಾಯಣ್ಣ 1799ನೆ ಇಸ್ವಿ ಆಗಸ್ಟ್ 15 ರಂದು ಜನಿಸಿದನು. ಈ ದಿನ ಭಾರತೀಯರಿಗೆಲ್ಲ ವಿಶೇಷವಾದುದಲ್ಲವೇ? ಕಿತ್ತೂರಿನ ಅರಸ ಮರಣವನ್ನಪ್ಪಿದಾಗ ದತ್ತು ಪುತ್ರನನ್ನು ವಾರಸುದಾರನನ್ನಾಗಿ ಮಾಡಬೇಕೆಂಬುದು ರಾಣಿ ಚೆನಮ್ಮನ ಇಚ್ಛೆಯಾಗಿತ್ತು. ಆಗ ಬ್ರಿಟಿಷರು ಕಿತ್ತೂರು ಸಿಂಹಾಸನವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಸಂಗೊಳ್ಳಿ ರಾಯಣ್ಣ ತನ್ನ ದಕ್ಷರಾದ ಸೈನಿಕರೊಡಗೂಡಿ ಸ್ವಾತಂತ್ರದ ಯುದ್ಧವನ್ನು ಸಾರಿದನು. ಬ್ರಿಟಿಷ್ ಸೈನಿಕರ ಗುಲಾಮಗಿರಿಯಿಂದ ಕಿತ್ತೂರನ್ನು ಉಳಿಸಲು ವೀರಾವೇಷದಿಂದ ಹೋರಾಡಿದನು. ಯುದ್ಧಲ್ಲಿ ಒಮ್ಮೆ ಸೋತ ಸಂದರ್ಭದಲ್ಲಿ ದತ್ತು ಪುತ್ರ ಶಿವಲಿಂಗಪ್ಪನೊಂದಿಗೆ ತಲೆಮರೆಸಿಕೊಂಡನು. ಕಿತ್ತೂರು ಸಾಮ್ರಾಜ್ಯದ ಉಳಿವೇ ಅವನ ಧ್ಯೇಯವಾಗಿತ್ತು.

ಜಮೀನ್ದಾರರು ಮತ್ತು ಬ್ರಿಟಿಷರೊಂದಿಗೆ ಪಾಲುದಾರರಾಗಿ ಬಡವರನ್ನು ಶೋಷಿಸುತ್ತಿದ್ದ ಶ್ರೀಮಂತರಿಗೆ ರಾಯಣ್ಣ ದುಃಸ್ವಪ್ನನಾಗಿದ್ದನು. ಜಮೀನ್ದಾರರಿಂದ ಹಣ ಮತ್ತು ಸಂಪತ್ತನ್ನು ಲೂಟಿ ಮಾಡಿ ಬಡವರಿಗೆ ನೀಡುತ್ತಿದ್ದನು. ಬ್ರಿಟಿಷ್ ಸರ್ಕಾರವು ರಾಯಣ್ಣ ಮತ್ತು ಅವನ ಸೈನ್ಯದಿಂದ ಬಲವಾದ ಪ್ರತಿರೋಧ ಅನುಭವಿಸಿತ್ತು. ಸಂಗೊಳ್ಳಿ ರಾಯಣ್ಣನನ್ನು ನೇರವಾಗಿ ಹಿಡಿಯಲು ಸಾಧ್ಯವಿಲ್ಲವೆಂದು ಮನಗಂಡಿದ್ದ ಬ್ರಿಟೀಷರು, ಆತನ ಚಿಕ್ಕಪ್ಪ ಲಕ್ಷ್ಮಣರಾಯನೊಂದಿಗೆ ಸಖ್ಯವನ್ನು ಬೆಳೆಸುವ ಮೂಲಕ ಕುತಂತ್ರದಿಂದ ರಾಯಣ್ಣನನ್ನು ಸೆರೆಹಿಡಿದರು. ಬ್ರಿಟಿಷರು ರಾಯಣ್ಣನನ್ನು 1831ರ ಜನವರಿ 26ರಂದು ನೇಣುಗಂಬಕ್ಕೇರಿಸಿದರು. ಆಗ ರಾಯಣ್ಣ ಕೇವಲ 33 ವಯಸ್ಕನಷ್ಟೆ. ನೇಣುಗಂಬಕ್ಕೇರಿಸುವ ಮುನ್ನ ರಾಯಣ್ಣ ಮಾತನಾಡುತ್ತ " ನಾನು ಈಗ ಸಾಯಬಹುದು ಆದರೆ ಶೀಘ್ರದಲ್ಲೇ ಮತ್ತೆ ಹುಟ್ಟಿ ಬರುವೆ ಮತ್ತು ಬ್ರಿಟಿಷರ ದಾಸ್ಯದಿಂದ ಮುಕ್ತವಾಗುವವರೆಗೆ ನನ್ನ ರಾಜ್ಯ ಮತ್ತು ಜನರಿಗಾಗಿ ಹೋರಾಡುವೆ" ಎಂದು ಹೇಳಿದನು.

ಇಂತಹ ಶ್ರೇಷ್ಠ ದೇಶಭಕ್ತನಾದ ಸಂಗೊಳ್ಳಿ ರಾಯಣ್ಣನು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾನೆ ಎಂಬುದು ಹೆಮ್ಮೆಯ ವಿಷಯ. ನಮ್ಮ ಭಾರತದ ಈ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನಿಗೆ ನಾವು ನಮನಗಳನ್ನು ಸಲ್ಲಿಸೋಣ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ರಾಷ್ಟ್ರದ ಜನತೆ ಯಾರನ್ನು ಪ್ರೀತಿಯಿಂದ 'ನೇತಾಜಿ' ಎಂದು ಕರೆಯುತ್ತಿದ್ದರು?
2. ಸಾರ್ವತ್ರಿಕ ಶಿಕ್ಷಣವನ್ನು ಪ್ರತಿಪಾದಿಸಿದ ಸಮಾಜ ಸುಧಾರಕರು ಯಾರು?
3. ಬೌದ್ಧ ಮತದ ಸ್ಥಾಪಕರು ಯಾರು?
4. ನಳಂದ ವಿಶ್ವವಿದ್ಯಾಲಯುದಲ್ಲಿ ಉನ್ನತ ವಿದ್ಯೆಯು ಬೆಳವಣಿಗೆಯನ್ನು ಯಾವ ರಾಜನು ಘೋಷಿಸಿದನು?
5. ಭಾರತದ ಸಂವಿಧಾನದಲ್ಲಿ ಎಷ್ಟು ಮೂಲಭೂತ ಕರ್ತವ್ಯಗಳನ್ನು ನೀಡಲಾಗಿದೆ?

## ಜ್ಞಾನ ವಿಜ್ಞಾನ

1. ಕೃಷ್ಣರಾಜ ಸಾಗರ ಯಾವ ಜಿಲ್ಲೆಗೆ ಸೇರಿದೆ?
2. ಕೂಡಲ ಸಂಗಮ ಯಾವ ನದಿಗಳ ಸಂಗಮವಾಗಿದೆ?
3. ನಮ್ಮ ಭಾರತದ ಈಗಿನ ರಾಷ್ಟ್ರಪತಿಯ ಹೆಸರೇನು?
4. ಸಾಬೂನಿನೊಂದಿಗೆ ಸುಲಭವಾಗಿ ನೊರೆ ಕೊಡದ ನೀರನ್ನು ಏನೆನ್ನುವರು?
5. ಕಾರಿನ ಬ್ಯಾಟರಿಯಲ್ಲಿ ಉಪಯೋಗಿಸುವ ಆಮ್ಲ ಯಾವುದು?

## ಜುಲೈ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಬಾಲ ಗಂಗಾಧರ ತಿಲಕ್
2. ರಾಷ್ಟ್ರಕೂಟರು
3. ರಾಜ ಹರಿಸಿಂಗ್
4. ಆನಿಬೆಸೆಂಟ್
5. ರಾಜಗೀರ್

**ಜ್ಞಾನ-ವಿಜ್ಞಾನ – ಉತ್ತರಗಳು**

1. ಪ್ರಧಾನ ಮಂತ್ರಿ
2. ಬೆಂಗಳೂರು
3. ಜಲಜನಕ
4. ಜೀವಸತ್ವ 'ಎ'
5. ಮಧುಮೇಹ ( ಡಯಾಬಿಟಿಸ್)

**ನಿಮ್ಮ ಕೈಲಾದಷ್ಟು ಗುರುವನ್ನು ಪ್ರೀತಿಸಿ, ಆದರೆ ಸ್ವತಂತ್ರವಾಗಿ ಆಲೋಚಿಸಿ – ಸ್ವಾಮಿ ವಿವೇಕಾನಂದ**

# ಭಾರತ ಮಾತಾ ಪೂಜನ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ



MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-08-2022 Date of Posting 20th or 21st of every month Posted at Periodical Rate

# ಎಬಿಆರ್‌ಎಸ್‌ಎಮ್‌ನ ರಾಷ್ಟ್ರೀಯ ಅಧಿವೇಶನದ ತಯಾರಿ





ದಿನಾಂಕ 09.08.2022ರ ಮಂಗಳವಾರದಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ನವೆಂಬರ್ 10, 11, 12 ಮತ್ತು 13 ರಂದು ಬೆಂಗಳೂರಿನ ಸಮೀಪವಿರುವ ಚನ್ನೇನಹಳ್ಳಿಯಲ್ಲಿ ನಡೆಯಲಿರುವ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಅಧಿವೇಶನದ ಪೂರ್ವಭಾವಿ ಸಭೆ ನಡೆಸಿತು.

ಸಭೆಯಲ್ಲಿ ರಾಷ್ಟ್ರೀಯ ಅಧಿವೇಶನ ನಡೆಯುವ ಸ್ಥಳದ ಬಗ್ಗೆ ವೀಕ್ಷಣೆಯ ಜೊತೆ ವಿವರವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಾಪೋಷಕರಾದ ಕೃ.ನರಹರಿಜೀಯವರು ನೀಡಿದರು. ಸ್ಥಳದ ವೀಕ್ಷಣೆಯ ನಂತರ ಪೂರ್ವ ತಯಾರಿಯ ಕಾರ್ಯ ಹಂಚಿಕೆಯನ್ನು ಮಾಡಲಾಯಿತು. ದೇಶದ ಎಲ್ಲೆಡೆಯಿಂದ ಸುಮಾರು 2000 ಕಾರ್ಯಕರ್ತರು ಈ ಅಧಿವೇಶನದಲ್ಲಿ ಭಾಗವಹಿಸಲಿದ್ದು, ಅಚ್ಚುಕಟ್ಟಾಗಿ ಅಧಿವೇಶನವನ್ನು ನಡೆಸಲು ಯೋಚಿಸಲಾಯಿತು.

ಸಭೆಗೆ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಂಘಟನಾ ಮಂತ್ರಿಗಳಾದ ಶ್ರೀಯುತ ಮಹೇಂದ್ರಕಪೂರ್, ಸಹ ಸಂಘಟನಾ ಮಂತ್ರಿಗಳಾದ ಶ್ರೀಯುತ ಲಕ್ಷ್ಮಣ್‌ಜೀ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಶಿವಾನಂದ ಸಿಂಧನಕೇರ, ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀಯುತ ಸಂದೀಪ್ ಬೂದಿಹಾಳ್, ಕಾರ್ಯಾಧ್ಯಕ್ಷರಾದ ಶ್ರೀಯುತ ಅರುಣ್ ಶಹಾಪೂರ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ್ ಪಾಟೀಲ್, ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಗಂಗಾಧರ್, ಖಜಾಂಚಿಗಳಾದ ಶ್ರೀಯುತ ಜೆ.ಎಮ್. ಜೋಶಿ, ಶ್ರೀಯುತ ವೃಷಭೇಂದ್ರ, ಶ್ರೀಯುತ ಸುರೇಂದ್ರ, ಶ್ರೀಯುತ ಜಿ.ಕೆ ತಳವಾರ್, ಶ್ರೀಮತಿ ವಿಜಯಲಕ್ಷ್ಮಿ ಬಿ, ಶ್ರೀಮತಿ ಮನೋರಮಾ, ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀಯುತ ರಘು, ಶ್ರೀಯುತ ರಾಜಣ್ಣರವರು ಭಾಗವಹಿಸಿ ಸಮಾಲೋಚನೆ ನಡೆಸಿದರು. ಸಭೆಯಲ್ಲಿ ಅನೇಕ ತಂಡಗಳನ್ನಾಗಿ ಮಾಡಿ ಕಾರ್ಯ ಹಂಚಿಕೆ ಮಾಡಲಾಯಿತು.






ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ – ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com